<u>ದಿನಾಂಕಃ **10-10-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು**.**</u>

<u>ಪಾಟೀ ಸವಾಲುಃ ಪ್ರತಿವಾದಿ **6** ರಿಂದ **10** ರ ಪರ ಶ್ರೀ ಎಂ ಹೆಚ್ ಎಸ್ ಕೆ ವಕೀಲರಿಂದಃ</u>

ವಾದಿಯ ವಕೀಲರ ಹೆಸರು ನಟಶೇಖರ. ಈ ದಾವೆಗೆ ಸಂಬಂಧ ಪಟ್ಟಂತೆ ನಾನು ನಟಶೇಖರ್ ವಕೀಲರನ್ನು ಭೇಟಿ ಆಗಿರುವುದಿಲ್ಲ. ಈ ದಾವೆಯನ್ನು ನಡೆಸಲು ನನ್ನ ತಾಯಿಯಾಗಲೀ ಮತ್ತು ನನ್ನ ತಂಗಿ ಯಾವುದೇ ಅಧಿಕಾರ ಪತ್ರ ನೀಡಿರುವುದಿಲ್ಲ ಎಂದರೆ ಸರಿ. ನಮ್ಮ ತಂದೆ ಪಟ್ಟಣ ಪಂಚಾಯಿತಿಯಲ್ಲಿ ರಾಜಸ್ವ ನಿರೀಕ್ಷಕರಾಗಿ ನಿವೃತ್ತಿ ಹೊಂದಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆಯಲ್ಲಿ ನಿಮ್ಮ ತಂದೆಯ ಸಹಿ ಇದ್ದು ಅದನ್ನು ಈಗ ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಡಿ - 19 ಎಂದ ಗುರುತಿಸಲಾಯಿತು. ನಮ್ಮ ತಂದೆ ತಮ್ಮ ಜೀವಿತಾವಧಿಯಲ್ಲಿ ನನ್ನ, ನನ್ನ ತಾಯಿ ಮತ್ತು ನಮ್ಮ ತಂಗಿಯರ ಹಿತಾಸಕ್ತಿಗೆ ವಿರುದ್ಧವಾಗಿ ನಡೆದುಕೊಂಡಿರುವುದಿಲ್ಲ ಎಂದರೆ ಸರಿ. ನನ್ನ ದೊಡ್ಡಪ್ಪ ಶಂಕ್ರಪ್ಪ ಇವರು ಸಹ ತಮ್ಮ ಜೀವಿತಾವಧಿಯಲ್ಲಿ ಅವರ ಹೆಂಡತಿ ಮತ್ತು ಮಕ್ಕಳ ಇಚ್ಚೆಗೆ ವಿರುದ್ಧವಾಗಿ ನಡೆದುಕೊಂಡಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

2. ನನ್ನ ಚಿಕ್ಕಪ್ಪ 9 ನೇ ಪ್ರತಿವಾದಿ ನಡುವೆ ನನ್ನ ಸಂಬಂಧ ಚೆನ್ನಾಗಿ ಇದೆ ಎಂದರೆ ಸರಿ. ನನ್ನ ಚಿಕ್ಕಪ್ಪ ನನ್ನ ಮತ್ತು ನನ್ನ ತಾಯಿ ಮತ್ತು ತಂಗಿಯರ ಇಚ್ಛಾಶಕ್ತಿಗೆ ವಿರುದ್ಧವಾಗಿ ನಡೆದುಕೊಂಡಿರುವುದಿಲ್ಲ ಎಂದರೆ ಸಾಕ್ಷಿ ಆಸ್ತಿಯ ವಿಚಾರವಾಗಿ ನಡೆದುಕೊಂಡಿರುತ್ತಾರೆ ಎಂದು ಉತ್ತರಿಸುತ್ತಾರೆ. ನಮ್ಮ ಮುತ್ತಜ್ಜಿ ಪುಟ್ಟಮ್ಮ ಹೆಗ್ಗಡತಿ ಯಾವಾಗ ಹುಟ್ಟಿರುತ್ತಾರೆ ಮತ್ತು ತೀರಿಕೊಂಡಿರುತ್ತಾರೆ ಎಂಬುದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಪುಟ್ಟಮ್ಮ ಹೆಗ್ಗಡತಿ ಇವರ ಬದುಕಿನ ಬಗ್ಗೆ ನನಗೆ ಖುದ್ದಾಗಿ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಪುಟ್ಟಮ್ಮ ಹೆಗ್ಗಡತಿ ಏನೇನು ವ್ಯವಹಾರ ಮಾಡಿರುತ್ತಾರೆ ಎಂಬುದರ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿ ನಾನು ಆವಾಗ ಹುಟ್ಟಿರಲಿಲ್ಲ ಎಂದು ಉತ್ತರಿಸುತ್ತಾರೆ.

3. ಅಸಲು ದಾವೆ ಸಂಖ್ಯೆ 66/2007 ರ ಬಗ್ಗೆ ನನ್ನ ತಂದೆ ಯಾವುದೇ ವಿಚಾರಗಳನ್ನು ನನ್ನ ಬಳಿ ಹಂಚಿಕೊಂಡಿರುವುದಿಲ್ಲ ಎಂದರೆ ಸರಿ. ನನಗೆ ಮೂಲ ದಾವೆ

ಸಂಖ್ಯೆ 66/2007 ರ ತೀರ್ಪು ಹಾಗೂ ಮೇಲ್ಮನವಿಯಲ್ಲಿ ಆದ ತೀರ್ಪಿನ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನಗೆ ಸದರಿ ದಾವೆಯ ಬಗ್ಗೆ ಮೇಲ್ಮನವಿಯ ಬಗ್ಗೆ ನಾನು ನಮ್ಮ ವಕೀಲರ ಮುಖಾಂತರ ಆಗಲೀ ಅಥವಾ ಬೇರೆಯವರು ಮುಖಾಂತರ ಆಗಲೀ ತಿಳಿದುಕೊಂಡಿಲ್ಲ ಎಂದರೆ ಸರಿ.

4. ದಾವಾ ಸ್ವತ್ತು 1 ರಿಂದ 4 ಆಸ್ತಿಗಳಲ್ಲಿ 9 ನೇ ಪ್ರತಿವಾದಿಗೆ ಯಾವುದೇ ಹಕ್ಕು ಹಿತಾಸಕ್ತಿ ಇರುವುದಿಲ್ಲ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನಮ್ಮ ಅಜ್ಜಿ ಕಾಡಮ್ಮ ಇವರು ಯಾವಾಗ ವಿಲ್ ಬರೆದಿರುತ್ತಾರೆ ಮತ್ತು ಯಾರಿಗೆ ಆಸ್ತಿ ಕೊಟ್ಟಿರುತ್ತಾರೆ ಎಂಬುದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ವಿಲ್ ಬಗ್ಗೆ ನನಗೆ ನ್ಯಾಯಾಲಯಕ್ಕೆ ಬಂದ ಮೇಲೆ ಗೊತ್ತಾಗಿರುತ್ತದೆ. ನಮ್ಮ ವಕೀಲರ ಬಳಿ ಈ ಹಿಂದೆ ಆದ ದಾವೆಯ ಬಗ್ಗೆ ಕೇಳಿ ತಿಳಿದುಕೊಂಡಿರುವುದಿಲ್ಲ ಎಂದರೆ ಸರಿ. ಈ ದಾವೆಯಲ್ಲಿ ಜಯಲಕ್ಷ್ಮಿ , ಚಂದ್ರಶೇಖರ್ ಮತ್ತು ಮಂಜುನಾಥ್ ಇವರು ತಮ್ಮ ನಿಲುವುಗಳು ಏನು ಎಂಬುದರ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ನಿಪಿ- 45 ರಲ್ಲಿ ಕಾಣುವ ಮನೆ ನಿರ್ಮಾಣವಾಗಿ 20 ವರ್ಷಗಳ ಮೇಲೆ ಆಗಿರುತ್ತದೆ. ಸದರಿ ಮನೆಗೆ ಹೆಚ್ ಪಿ ಮಂಜುನಾಥ್ ಇವರಿಗೆ ಯಾವ ರೀತಿ ಹಕ್ಕು ಬಂದಿರುತ್ತದೆ ಎಂಬುದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಸದರಿ ಮನೆ ಹೆಚ್ ಪಿ ಮಂಜುನಾಥ್ ರವರಿಗೆ ಯಾವ ರೀತಿ ಬಂದಿರುತ್ತದೆ ಎಂಬ ಬಗ್ಗೆ ಹೇಳಿರುವುದಿಲ್ಲ ಎಂದರೆ ಸರಿ.

5. ದಾವಾ ಸ್ವತ್ತು 1 ರಿಂದ 3 ರಲ್ಲಿ 8 ನೇ ಪ್ರತಿವಾದಿ ವಿಲೇವಾರಿ ಮಾಡುವ ಹಕ್ಕು ಪ್ರಾಪ್ತವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ ಸಾಕ್ಷಿ ಮುಂದುವರೆದು ಅದು ನಮ್ಮ ಪಿತ್ರಾರ್ಜಿತ ಆಸ್ತಿ ಎಂದು ಉತ್ತರಿಸುತ್ತಾರೆ. ಹರಿಹರಪುರ ಗ್ರಾಮದಲ್ಲಿ ಇರುವ ಮನೆ ಈಗ ಅಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮನೆ ಅಸ್ತಿತ್ವದಲ್ಲಿ ಇಲ್ಲದಿರುವ ಬಗ್ಗೆ ನಾನು ಯಾವುದೇ ದಾಖಲೆ ನೋಡಿರುವುದಿಲ್ಲ ಆದರೆ ಫೋಟೋ ಇರುತ್ತದೆ. ನಾನು ಮತ್ತು ವಾದಿ ಸೇರಿಕೊಂಡು ಈಗಾಗಲೇ ದಾವಾ ಆಸ್ತಿ 1 ರಿಂದ 4 ರ ಸಂಬಂಧ ತೀರ್ಮಾನ ಆಗಿದ್ದರೂ ಸಹ ಈಗ ಸುಳ್ಳು ದಾವೆ ಹೂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತು 5 ಅದು ಎಲ್ಲಿ ಇರುತ್ತದೆ ಎಂದು ನಾನು ದಾಖಲೆಗಳನ್ನು ನೋಡಿರುವುದಿಲ್ಲ. ದಾವಾ ಸ್ವತ್ತು 5 ಈಗ ಸರ್ಕಾರದ ಸ್ವಾಧೀನದಲ್ಲಿ ಇರುತ್ತದೆ. ನನಗೆ 10 ನೇ ಪ್ರತಿವಾದಿಗೆ ನಮ್ಮ ತಂದೆ

ಜಮೀನು ಮಾರಾಟ ಮಾಡಿದ ಬಗ್ಗೆ ಹೇಳಿದ ಕಾರಣ ಗೊತ್ತಿರುತ್ತಾರೆ. ದಾವಾ ಸ್ವತ್ತು 1 ರಿಂದ 3 ನ್ನು 10 ನೇ ಪ್ರತಿವಾದಿ ಎಲ್ಲಾ ದಾಖಲೆಗಳನ್ನು ಪರಶೀಲಿಸಿ ಪ್ರತಿವಾದಿ 8 ರವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನನಗೆ ದಾಖಲೆಯ ಬಗ್ಗೆ ಗೊತ್ತಿರುವುದಿಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಃಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ